ಟೈಪ್ ಮಾಡಿದ ಪತ್ರವನ್ನು ತಂದು ತಮ್ಮ ಕೈಗೆ ಕೊಟ್ಟ ಕೂಡಲೇ ಅದಕ್ಕೆ ಸಹಿ ಹಾಕಿದ ಡಾ. ಚಟರ್ಜಿ ಅವರು, 'ಪಟಿಹಾ, ಈ ಪತ್ರವನ್ನು ಈಗಲೇ ಡೈರೆಕ್ಟೋರೇಟಿಗೆ ಫ್ಯಾಕ್ಸ್ ಮಾಡಿ, ಅನಂತರ ಅದರ ಹಾರ್ಡ್ ಕಾಪಿಯನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳಿಸು' ಎಂದು ಸೂಚನೆ ಕೊಟ್ಟು, ಕಚೇರಿಯ ಹೊತ್ತು ಮುಗಿದ ಕಾರಣ ಮನೆಯ ಕಡೆಗೆ ನಡೆದಿದ್ದರು.

★★★

ವಿಷಯ ಸಣ್ಣದಾಗಿದ್ದರೂ, ಕಾನೂನಿನ ಸಮಸ್ಯೆ ತೊಡಕಾಗಿ ಕಾಡತೊಡಗಿದ್ದ ಕಾರಣ ಡಾ. ಸತ್ಯಾರ್ಥಿ ಚಟರ್ಜಿ ಅವರ ವಿವರಣಾ ಪತ್ರವು ಮಹಾನಿರ್ದೇಶನಾಲಯದ ಅಧಿಕಾರಿಗಳ ತಲೆ ಕೆಡಿಸಿತು. 'ನಿಮ್ಮಿಂದ ತಪ್ಪಾಗಿದೆ' ಎಂದು ಮತ್ತೊಮ್ಮೆ ಸೂಚನೆ ಕೊಡಲೂ ಆಗದೆ, ಹಾಗೂ ಡಾ. ಚಟರ್ಜಿ ಅವರ ವಿವರಣೆಯನ್ನು ಅಷ್ಟೊಂದು ಸರಳವಾಗಿ ತಳ್ಳಿ ಹಾಕಲೂ ಆಗದೆ ವಿಚಿತ್ರ ಸ್ಥಿತಿಯಲ್ಲಿ ಸಿಕ್ಕಿಕೊಂಡ ಮೇಲಧಿಕಾರಿಗಳು ಇದನ್ನು ಹೇಗೆ ಪರಿಹರಿಸಬೇಕೆಂದು ಮತ್ತೆ ಮತ್ತೆ ತಲೆ ಕೆಡಿಸಿಕೊಳ್ಳತೊಡಗಿದರು. ಬಹುಶಃ ಮಹಾನಿರ್ದೇಶನಾಲಯಕ್ಕೆ ಇಂಥ ಸಮಸ್ಯೆ ಎದುರಾದದ್ದು ಇದೇ ಮೊದಲನೆಯದು. ಹೀಗಿದ್ದರೂ ಕೇಸನ್ನು ಸುಮ್ಮನೇ ಬಿಡುವಂತಿಲ್ಲ. ಬಿಟ್ಟರೆ ಮಹಾನಿರ್ದೇಶನಾಲಯವು ತನ್ನ ಅಸಮರ್ಥತೆಯನ್ನು ಒಪ್ಪಿಕೊಂಡಂತೆಯೇ. ಬದಲಾಗಿ, 'ನಿಮ್ಮ ಕ್ರಮ ಸರಿಯಾಗಿದೆಯೆಂದು' ಶರಾ ಬರೆದು ಕಳಿಸಿದರೆ ಅದು ತಮ್ಮ ಸಂಸ್ಥೆಗೇ ಅವಮಾನ! ವಿಚಿತ್ರ ಸಂದಿಗ್ಧತೆಯಲ್ಲಿ ಸಿಕ್ಕಿಕೊಂಡ ಮಹಾನಿರ್ದೇಶನಾಲಯದ ಅಧಿಕಾರಿಗಳು ನಾಲ್ಕಾರು ದಿನ ಯೋಚಿಸಿಯೇ ಯೋಚಿಸಿದರು. ಆದರೂ ಅವರಿಗೆ ಸಮರ್ಪಕ ಉತ್ತರ ಮಾತ್ರ ಸಿಗಲಿಲ್ಲ.

ಇಂಥ ವಿಚಿತ್ರ ಸ್ಥಿತಿಯಲ್ಲೇ ವಿವಿಧ ಅಧಿಕಾರಿಗಳು ಸಭೆ ಸೇರಿ ಚರ್ಚಿಸುತ್ತಿದ್ದಾಗ, ಸೆಕ್ಷನ್ ಆಫೀಸರ್ ಬಿಮಲ್ ವರ್ಮಾ ಕೊಟ್ಟ ಒಂದು ಸಲಹೆ ಆ ಸಮಸ್ಯೆಯಿಂದ ಪಾರಾಗಲು ಸೂಕ್ತ ಹಾಗೂ ಸರಳ ಮಾರ್ಗವೆನಿಸಿತು ಅವರಿಗೆ. ವರ್ಮಾನ ಸಲಹೆಯ ಮೇರೆಗೆ ಅಕೌಂಟಂಟ್ ಜನರಲ್ ಆಫೀಸಿನ ಒಬ್ಬ ಹಿರಿಯ ಅಧಿಕಾರಿ, ಕಾನೂನು ಇಲಾಖೆಯ ಒಬ್ಬ ತಜ್ಞರು ಮತ್ತು

